# ಶ್ರೀ ಸುಧಿನಿಧಿ ತೀರ್ಥಶ್ರೀಪಾದಂಗಳವರು (ಶ್ರೀಪಾದರಾಜಮಠ)



**ಆರಾಧನೆ – ಪಾಲ್ಘುಣ ಬಹುಳ ಅಷ್ಟಮಿ**

ಜನ್ಮ ನಾಮ – ಹರಿಯಪ್ಪಾಚಾರ್ಯ

(ಜನರು ಇವರನ್ನು ಆಶ್ರಮನಾಮವಾದ ಶ್ರೀಸುಧಿನಿಧಿತೀರ್ಥರು ಆದರೂ, ಶ್ರೀಹರಿಯಪ್ಪಾಚಾರ್ ಸ್ವಾಮಿಗಳೆಂದು ಕರೆಯುತ್ತಿದ್ದರು)

**ಆಶ್ರಮ ಪ್ರವೇಶ – 1888**

**ಆಶ್ರಮ ಗುರುಗಳು – ಸುಜ್ಞಾನನಿಧಿ ತೀರ್ಥರು**

**ಆಶ್ರಮ ಶಿಷ್ಯರು – ಶ್ರೀ ಮೇಧನಿಧಿ ತೀರ್ಥರು**

**ವೃಂದಾವನ ಪ್ರವೇಶ – 1908 - ಈರೋಡ್**

**(ವಿಶ್ವಾವಸು ಸಂವತ್ಸರ ಪಾಲ್ಘುಣ ಅಷ್ಟಮಿ)**

**ಇವರ ಕಾರ್ಯಕ್ಷೇತ್ರ – ಈರೋಡ್**

ಇವರ ಪಾಂಡಿತ್ಯ ಪ್ರತಿಭೆಗಳು ಅಸಾಧಾರಣವಾಗಿದ್ದು, ಇವರನ್ನು ಮುಳಬಾಗಿಲಿನಲ್ಲಿದ್ದ ಪಂಡಿತರ ಸಮೂಹಕ್ಕೆ ಕಲಶ ಪ್ರಾಯರೆಂದು ಪರಿಗಣಿಸಲಾಗಿತ್ತು. ಇವರು ವಿದ್ಯೆಯಲ್ಲಿ ಎಷ್ಟು ಚತುರರೋ ಅಷ್ಟೇ ನಿಪುಣತೆಯಿಂದ ಶ್ರೀಮಠದ ಆಡಳಿತವನ್ನು ನಿಭಾಯಿಸಿದರು. ಇವರ ಕಾಲದಲ್ಲಿ ಶಾಖಾಮಠವು ಮುಖ್ಯಮಠದೊಂದಿಗೆ ಮಿಳಿತವಾದ್ದರಿಂದ ಇವರು ಸಾಕಷ್ಟು ಸಮಯ ತಮಿಳುನಾಡಿನ ಈರೋಡಿನಲ್ಲಿ ವಾಸಿಸುತ್ತಿದ್ದರು. ಇವರ ಅಪಾರವಾದ ಪಾಂಡಿತ್ಯ, ಕುಶಲತೆಗಳನ್ನು ಮತ್ತು ಸೌಹಾರ್ದ ಸಂಯಮತೆಯನ್ನು ಗುರುತಿಸಿ ಉತ್ತರಾದಿಮಠದ ಶ್ರೀಸತ್ಯಪರಾಕ್ರಮತೀರ್ಥರು, ತಿರುಪತಿ ತಿರುಚಾನೂರು ಮಧ್ವಸಿದ್ಧಾಂತ ಉನ್ನಾಹಿನಿ ಸಭಾಮಂಟಪದಲ್ಲಿ ಇವರಿಂದಲೇ ಶ್ರೀವೇದವ್ಯಾಸದೇವರ ಪ್ರತಿಷ್ಠಾಪನೆಯು ನಡೆಯಬೇಕೆಂದು ಒತ್ತಾಯ ಪೂರ್ವಕವಾಗಿ ಆಹ್ವಾನಿಸಿದರು. ಇವರು ಬ್ರಾಹ್ಮಣಾಧಿಷ್ಠಾನದಲ್ಲಿ ವಿಶೇಷವಾದ ಗೌರವವನ್ನು ಹೊಂದಿದ್ದರು. ಮಧ್ವಶಾಸ್ತ್ರಕ್ಕೆ, ಇವರು ಅಪೂರ್ವವಾದ ಒಂದು ಸ್ಥಾನವನ್ನು ನೀಡಿದರು. ಸುಮಧ್ವವಿಜಯ ಗ್ರಂಥದ ಪಾಠವಿಲ್ಲದೆ ಬೇರಾವ ಶಾಸ್ತ್ರಪಾಠವನ್ನೂ ಪ್ರಾರಂಭಿಸುತ್ತಿರಲಿಲ್ಲ. ಮಣಿಮಂಜರಿಯ ಮಂಗಳಶ್ಲೋಕದಿಂದ ಶ್ರೀಮನ್ನ್ಯಾಯಸುಧಾ ಗ್ರಂಥದ ಅನುವಾದವನ್ನು ಮಾಡುತ್ತಿದ್ದರು. ಈರೋಡಿನಲ್ಲಿ ಅನೇಕ ಪಂಡಿತರು ಇವರಲ್ಲಿ ಪಾಠ ಕಲಿತವರಿದ್ದಾರೆ.

ಇವರು ಅನ್ಯಮತೀಯರನ್ನು ಗೌರವಿಸುವ ಸಂಪ್ರದಾಯವನ್ನು ಬೆಳೆಸಿದರು. ಇವರ ಬಗ್ಗೆ ದಿವಂಗತ ಸಾಹಿತಿಗಳಾದ ಡಾ:ಡಿ.ವಿ.ಗುಂಡಪ್ಪನವರು ತಮ್ಮ "ಮುಳುಬಾಗಿಲಿನ ಮಾಧ್ವಮಹನೀಯರು" ಎಂಬ ಪುಸ್ತಕದಲ್ಲಿ ಹೀಗೆ ವಿವರಿಸಿದ್ದಾರೆ. –

"ಶ್ರೀಗಳು ಬೆಳಿಗ್ಗೆ ೭ಘಂಟೆ ಹೊತ್ತಿಗಾಗಲೇ ತಮ್ಮ ಪ್ರಾತರ್ವಿಧಿಯನ್ನು ಮುಗಿಸಿಕೊಂಡು ನೃಸಿಂಹತೀರ್ಥದ ಕಡೆಯಿಂದ, ಹೆಬ್ಬಣಿ ಶ್ರೀನಿವಾಸಾಚಾರ್ಯರ ಜೊತೆ ವಾಪಸ್ಸು ಬರುತ್ತಿದ್ದರು. ನಾನು ಶಾಲೆಗೆ ಹೋಗುವಾಗ, ದಾರಿಯಲ್ಲಿ ಸಿಗುತ್ತಿದ್ದ ಶ್ರೀಗಳವರನ್ನು ಸಾಷ್ಟಾಂಗ ನಮಸ್ಕಾರ ಮಾಡಲು ನನ್ನನ್ನು ವಾತ್ಸಲ್ಯದೃಷ್ಟಿಯಿಂದ ನೋಡಿ ನನ್ನನ್ನು ಆಶೀರ್ವದಿಸಿ ಸ್ಕೂಲಿಗೆ ಹೋಗಲು ಹೇಳುತ್ತಿದ್ದರು. ಶ್ರೀಗಳು ಅನ್ಯಮತಗಳಲ್ಲಿ ಸಹನೆ ಸ್ನೇಹಗಳನ್ನಿರಿಸಿದ್ದ ಪರಮೋದಾರಿಗಳು. ಎಲ್ಲರಿಂದಲೂ ಪೂಜ್ಯರಾಗಿದ್ದರು. "